ಉಪಾಧ್ಯಕ್ಷರು.—ಅದು ಈ ಪ್ರಶ್ನೆಯಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಈ ಶಾಲೆಗಳನ್ನು ತೆಗೆಯುವುದು ದುಡ್ಡು ಸಂಪಾದನೆ ಮಾಡ ಬೇಕೆಂಬ ದೃಷ್ಟಿಯಿಂದ ನಡೆಯುತ್ತಾ ಇವೆ. ಇದು ಒಂದು ರ್ಯಾಕೆಟ್ ಆಗಿದೆ. ಇದನ್ನು ಪ್ರೈವೇಟ್‌ನವರಿಗೆ ಕೊಡುವುದಕ್ಕೆ ಬದಲಾಗಿ ಸರ್ಕಾರದವರೇ ನಡೆಸುವುದಕ್ಕೆ ಏಕೆ ಯೋಚನೆ ಮಾಡಬಾರದು?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಂಪೂರ್ಣವಾಗಿ ಎಲ್ಲವನ್ನೂ ಸರ್ಕಾರವೇ ಮಾಡುವುದಕ್ಕಾಗುವುದಿಲ್ಲ. ಖಾಸಗಿ ಸಂಸ್ಥೆಯವರಿಗೂ ಕೂಡ ಸಾಕಾದಷ್ಟು ಪ್ರೋತ್ಸಾಹ ಕೊಡಬೇಕಾಗುತ್ತದೆ.

ಶ್ರೀ ಎಂ. ನಾಗಪ್ಪ.—ಪ್ರತ್ಯೇಕವಾಗಿ ಗರ್ಲ್ಸ್ ಹೈಸ್ಕೂಲುಗಳನ್ನು ತೆರೆಯುವುದಕ್ಕೆ ಪರ್ಮಿಷನ್ ಕೊಡತಕ್ಕ ಉದ್ದೇಶವಾದರೂ ಏನು? ಸರ್ಕಾರಿ ಗರ್ಲ್ಸ್ ಹೈಸ್ಕೂಲುಗಳಿಗೆ ಹೆಡ್ಮಾಸ್ಟರ್ಸ್ ಗಂಡಸರು ಮತ್ತು ಟೀಚರ್ಸ್ ಸಹ ಗಂಡಸರೇ ಇರುತ್ತಾರೆ ಹಾಗಿರುವಾಗ ಹೆಣ್ಣುಮಕ್ಕಳ ಶಾಲೆಗಳು ಅಂತ ಬೇರೆ ಮಾಡಲಿಕ್ಕೆ ಕಾರಣವೇನು?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಶಾಲೆಗಳನ್ನು ನಡೆಸುವುದು ಶಿಕ್ಷಕರ ಸಲುವಾಗಿ ಅಲ್ಲ, ವಿದ್ಯಾರ್ಥಿಗಳ ಸಲುವಾಗಿ ನಡೆಸಲಾಗುತ್ತದೆ. ಎಲ್ಲಿ ಮಹಿಳಾ ಶಿಕ್ಷಕಿಯರು ಸಿಕ್ಕುವುದು ಸಾಧ್ಯವಿಲ್ಲವೊ ಅಲ್ಲಿ ಮಾತ್ರ ಗಂಡಸರನ್ನು ನೇಮಕ ಮಾಡಿತ್ತೇವೆ. ಸಾಧ್ಯವಿದ್ದಲ್ಲೆಲ್ಲಾ ಮಹಿಳಾ ಶಿಕ್ಷಕಿಯರನ್ನೇ ನೇಮಕ ಮಾಡಿದ್ದೇವೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೋರಾರದಲ್ಲಿ ಹೆಣ್ಣು ಹುಡುಗಿಯರ ಸಂಖ್ಯೆ 1600 ಇದ್ದು 4-5 ವರ್ಷಗಳಿಂದ ಒಂದೇ ಸಮನೆ ಜನರ ಪ್ರತಿನಿಧಿಗಳು ಗರ್ಲ್ಸ್ ಸ್ಕೂಲು ಬೇಕೆಂದು ಹೇಳುತ್ತಾ ಇದ್ದರೂ ಕೂಡ ಅಲ್ಲಿ ಮಾಡದೇ ಮಲತಾಯಿ ಧೋರಣೆ ತೋರಿಸುತ್ತಾ ಇರುವುದಕ್ಕೆ ಕಾರಣವೇನು?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದು ಸರ್ಕಾರದವರು ಮಾಡಿದ್ದಲ್ಲ. ಎಲ್ಲೆಲ್ಲ ಖಾಸಗಿ ಸಂಸ್ಥೆಯವರು ಅಪ್ಲೈ ಮಾಡಿದ್ದಾರೋ ಅವರಿಗೆ ಕೊಟ್ಟಿದ್ದೇವೆ.

Grant of land to Yemmedoddi Collective Farming Society, Birur

275. Sri M. MALLAPPA (Birur).—

Will the Minister for Revenue be pleased to state :—

the steps taken by Government to grant relief to the Yemmedoddi Collective Farming Society, Birur hobli as per the recommendation of the petition Committee made in its third report presented on 10th September 1969 ?

Sri H. V. KOUJALGI (Minister for Revenue).—

As per the recommendation of the Petition Committee made in its third report presented on 10th September 1969, the Deputy Commissioner, Chickmagalur was directed to take steps to grant the lands released to the Society after demarketing the area. But in the meantime, the President of Yemmedoddi Collective Farming Society, Birur, represented to Government that there are possibilities of misuse of the land if it is granted to the society and that the question of grant of land to the Society may be dropped. The matter was therefore dropped.

ಶ್ರೀ ಎಂ. ಮಲ್ಲಪ್ಪ.---ತಾವು ಕೊಟ್ಟಂಥ ಉತ್ತರ ನತ್ಯಕ್ಕೆ ಬಹಳ ದೂರವಾಗಿದೆ ಎಂದು ಬಹಳ ವಿಷಾದದಿಂದ ಹೇಳುತ್ತೇನೆ. ಏಕೆಂದರೆ ಪಿಟಿಷನ್ ಕಮಿಟಿಯವರು ಕೊಟ್ಟಂಥ ಆದೇಶವನ್ನು ಸರ್ಕಾರದಲ್ಲಿ ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗಿಲ್ಲ. ತಾವು ಕೊಟ್ಟಂಥ ಉತ್ತರ ನತ್ಯಕ್ಕೆ ದೂರವಾದುದಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಅಧ್ಯಕ್ಷರೇ ಜಮೀನನ್ನು ಮಂಜೂರು ಮಾಡಬೇಡಿರಿ ಎಂದು ಮನವಿ ಮಾಡಿದ್ದರು, ಆದ್ದರಿಂದ ಆ ಪ್ರಶ್ನೆ ಬರುವುದಿಲ್ಲ.

ಶ್ರೀ ಎಂ. ಮಲ್ಲಪ್ಪ.—ಆ ಅಧ್ಯಕ್ಷರು ಯಾರು ? ಯಾವಾಗ ಅರ್ಜಿ ಮಾಡಿದರು ? ಅದನ್ನು ಯಾವಾಗ ಪರಿಶೀಲನೆ ಮಾಡಿದಿರಿ ?

ಶ್ರೀ ಎಚ್. ವಿ. ಕೌಜಲಗಿ.—ರಾಮಯ್ಯ ಅಂತ ಹೇಳಿ ಇದ್ದಾರೆ. ಮಂಜೂರು ಮಾಡುವ ಪ್ರಶ್ನೆಯನ್ನು ದುರುಪಯೋಗಪಡಿಸುವ ಸಾಧ್ಯತೆ ಇರುವುದರಿಂದ ಕೈಬೇಡಬೇಕೆಂದು ಮನವಿ ಮಾಡಿದ್ದಿರು. ಆದ್ದರಿಂದ ಕೈಬಿಡಲಾಯಿತು ಎಂದು ತಿಳಿಸಿದೆ.

ಶ್ರೀ ಎಂ. ಮಲ್ಲಪ್ಪ.—ತಾವು ಇದನ್ನು ರೀಕನ್‌ಸಿಡರ್ ಮಾಡಿ ಜಮೀನು ಸಾಗು ಮಾಡುತ್ತಾ ಇರತಕ್ಕ ರೈತರಿಗೆ ಅದನ್ನು ಕೊಡಲು ಈಗಲಾದರೂ ಪ್ರಯತ್ನ ಮಾಡುತ್ತೀರಾ ! ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಸಾಗುವಳಿ ಮಾಡುವವರಿಗೆ ಆ ರೀತಿ ಭೂಮಿ ಕೊಡಬೇಕೆಂದರೆ ಕಾಯಿದೆ ಪ್ರಶ್ನೆ ಇದೆ. ಅದನ್ನು 94ನೇ ಸೆಕ್ಷನ್ ಪ್ರಕಾರ ವಿಚಾರ ಮಾಡಬೇಕು. ಆ ಪ್ರಶ್ನೆ ಇದೆ. ಅದು ಬೇರೆ ಪ್ರಶ್ನೆಯಾಗುತ್ತದೆ.

Additional price of Rs. 3 per ton of Sugarcane

284. **Sri B. SATYANARAYANA SINGH** (Hospet).—

Will the Minister for Industries, Information and Publicity be pleased to state :—

(*a*) whether it is not binding on the State Government to force the Management of the Indian Sugar Refineries Limited, Hospet to pay the additional price of Rs. 3 per ton as agreed to before the Tripartite Committee constituted by the Government of Mysore ;

(*b*) if so, the steps taken in this regard ?

Sri M. RAJASHEKHARA MURTHY (Minister for Industries, Information and Publicity).—

(*a*) The Management of Sugar Factory cannot be compelled to pay the additional price of Rs. 3 per ton over and above the minimum price fixed by the Government of India.

(*b*) This does not arise. However, the management has been requested to pay extra price to the cane growers.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಮುಂದಿನವರ್ಷ ಕಬ್ಬನ್ನು ಕನಿಷ್ಠ ಬೆಲೆಗೆ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರದವರು ರೆಪ್ರಸೆಂಟೇಷನ್ ಮಾಡಿದ್ದಾರೆಯೇ ? ಹಾಗೆ ಮಾಡಿದ್ದರೆ, ಏನು ರೆಪ್ರಸೆಂಟೇಷನ್ ಮಾಡಿದ್ದಾರೆ ? ಮುಂದಿನ ವರ್ಷ ಕನಿಷ್ಠ ಬೆಲೆ ಅಂದರೆ ಒಂದು ಟನ್ನಿಗೆ 100 ರೂಪಾಯಿಗಳಿಗಿಂತ ಕಡಿಮೆ ಬೆಲೆ ಆಗಬಾರದೆಂದು ಶಿಫಾರಸು ಮಾಡುತ್ತೀರಾ ?